# 21-06-2020 ರ ಗ್ರಹಣದ ಅನುಷ್ಠಾನ


ಶನಿವಾರದ ಪೂಜೆ ಭೋಜನಗಳು 3

ಅಮಾವಾಸ್ಯಾ ಶ್ರಾದ್ಧ, ತರ್ಪಣ 6

ಪ್ರತಿಪದಾ ಶ್ರಾದ್ಧ 6

ಶನಿವಾರ ರಾತ್ರಿಯ ಕಾರ್ಯಗಳು 7

ಭಾನುವಾರ ಬೆಳಿಗ್ಗೆ 7

ಗ್ರಹಣದ ಕಾಲದಲ್ಲಿ 9

ಸ್ನಾನ 10

ಶ್ರಾದ್ಧ, ತರ್ಪಣ 14

ದಾನ 16

ಸಂಕಲ್ಪ ಸಮರ್ಪಣೆ 17

ಗ್ರಹಣದ ಫಲಾಫಲಗಳು 18

ಪರಿಹಾರ 23

ದೇಶ, ಮೋದಿ, ಯೋಧರಿಗಾಗಿ ಪ್ರಾರ್ಥಿಸಿ 25

ಹೋಮ ಹವನಗಳ ಕುರಿತು 27

ಗ್ರಹಣದ ನಂತರ 30

ಗ್ರಹಣದ ಕುರಿತ ಲೇಖನಗಳ ಲಿಂಕ್ 32

ಮಹಾ ಆಪತ್ತನ್ನು ಪರಿಹರಿಸುವ ಉಗ್ರನರಸಿಂಹ ಸ್ತುತಿ 34

ಶಾರ್ವರೀ ಸಂವತ್ಸರ  ಜ್ಯೇಷ್ಠ ಕೃಷ್ಣ ಅಮಾವಾಸ್ಯೆ [ 21-06-2020] ಭಾನುವಾರ ಬೆಳಿಗ್ಗೆ 10–04 ರಿಂದ ಮಧ್ಯಾಹ್ನ 1-23 ರವರೆಗೆ ಸೂರ್ಯಗ್ರಹಣವಿದೆ. ಆ ದಿವಸ ಗ್ರಹಣ ಆರಂಭವಾಗುವದಕ್ಕಿಂತ ಮುಂಚೆ, ಗ್ರಹಣಕಾಲದಲ್ಲಿ ಮತ್ತು ಗ್ರಹಣದ ನಂತರ ಮಾಡಬೇಕಾದ ಎಲ್ಲ ಸತ್ಕರ್ಮಗಳ ವಿವರವನ್ನು ತಿಳಿಯೋಣ.

ಇಲ್ಲಿ ಬಳಸಲ್ಪಡುವ ವೇಧ, ಸ್ಪರ್ಶ, ಮೋಕ್ಷ ಮುಂತಾದ ವಿಷಯಗಳ ಕುರಿತು ಲೇಖನದಲ್ಲಿ ವಿಸ್ತಾರವಾಗಿ ತಿಳಿಸಿದ್ದೇನೆ. ಅವುಗಳ ಲಿಂಕು ಇಲ್ಲಿವೆ –

**ಗ್ರಹಣದ ಅನುಷ್ಠಾನಗಳು**

vishwanandini.com/fullarticle.php?serialnumber=VNA004

**ಅಶೌಚದಲ್ಲಿ ಗ್ರಹಣದ ಆಚರಣೆ**

vishwanandini.com/fullarticle.php?serialnumber=VNA271

## ಶನಿವಾರದ ಪೂಜೆ ಭೋಜನಗಳು

ಭಾನುವಾರ ಬೆಳಿಗ್ಗೆ ಸೂರ್ಯಗ್ರಹಣ ಇದೆ. ಅದಕ್ಕಿಂತ ಮುಂಚೆ ವೇಧಕಾಲ. **ವೇಧಕಾಲದಲ್ಲಿ ಯಾವ ಪೂಜೆಯನ್ನೂ ಮಾಡಲು ಬರುವದಿಲ್ಲ.** ಭಾನುವಾರ ಬೆಳಿಗ್ಗೆ ಸಂಧ್ಯಾವಂದನೆ ಮತ್ತು ಪಾರಾಯಣಕ್ಕಷ್ಟೇ ಅಧಿಕಾರ. ನಿರ್ಮಾಲ್ಯ ಪುಷ್ಪಗಳನ್ನು ವಿಸರ್ಜಿಸಿ ಒಮ್ಮೆ ಅಭಿಷೇಕ ಮಾಡಬೇಕು. ಆದರೆ ಆ ಅಭಿಷೇಕದ ತೀರ್ಥವನ್ನು ಸ್ವೀಕರಿಸಬಾರದು.

ಇನ್ನು ಭೋಜನ ವಿಷಯ.

ಸೂರ್ಯಗ್ರಹಣ ಯಾವ ಯಾಮದಲ್ಲಿ ಆರಂಭವಾಗುತ್ತದೆಯೋ ಅದಕ್ಕಿಂತ ನಾಲ್ಕು ಯಾಮಗಳ ಮೊದಲು ವೇಧ ಆರಂಭವಾಗುತ್ತದೆ ಎಂದು ಸ್ಮೃತಿಮುಕ್ತಾವಲಿಯಲ್ಲಿ ಶ್ರೀಕೃಷ್ಣಾಚಾರ್ಯರು ತಿಳಿಸಿದ್ದಾರೆ —

**“ಸೂರ್ಯಗ್ರಹೇ ತು ನಾಶ್ನೀಯಾತ್ ಪೂರ್ವಂ ಯಾಮಚತುಷ್ಟಯಮ್”**

ಒಂದು ಯಾಮ ಎಂದರೆ ಮೂರು ಗಂಟೆಗಳು. ನಾಲ್ಕು ಯಾಮ ಎಂದರೆ ಹನ್ನೆರಡು ಗಂಟೆಗಳು. ಭಾನುವಾರ ಬೆಳಿಗ್ಗೆ 10-04 ಕ್ಕೆ ಗ್ರಹಣ ಆರಂಭವಾಗುತ್ತಿರುವದರಿಂದ ಅದಕ್ಕಿಂತ ಮುಂಚಿನ ಹನ್ನೆರಡು ಗಂಟೆಗಳು, ಅಂದರೆ ಶನಿವಾರ ರಾತ್ರಿ 10:04 ಕ್ಕೆ ವೇಧ ಆರಂಭವಾಗುತ್ತದೆ.

ಹೀಗಾಗಿ 20ನೆಯ ತಾರೀಕು, ಶನಿವಾರ ರಾತ್ರಿ 10:04 ರ ಒಳಗೆ ಭೋಜನವನ್ನು ಮುಗಿಸಬೇಕು. ಆ ನಂತರ ಗ್ರಹಣ ಮುಗಿಯುವವರೆಗೆ ಏನನ್ನೂ ಸ್ವೀಕರಿಸಬಾರದು.

ಸೂರ್ಯಗ್ರಹಣದಲ್ಲಿ ಅಶಕ್ತರಿಗೆ ಮೂರು ಯಾಮಗಳ ನಿಯಮ. ಅವರು ಶನಿವಾರ ಮಧ್ಯರಾತ್ರಿ 1:03 ರವರೆಗೆ ಫಲಾಹಾರವನ್ನು ಮಾಡಬಹುದು.

ಅಷ್ಟು ಹೊತ್ತಿನ ವರೆಗೆ ತೆಗೆದುಕೊಳ್ಳಬಹುದು ಎಂದಷ್ಟೇ ಅಭಿಪ್ರಾಯ. ರಾತ್ರಿ ಹನ್ನೊಂದರ ನಂತರ ತಿನ್ನಬಾರದು. ಅನಿವಾರ್ಯವಾಗಿ ಔಷಧಿ

ಇತ್ಯಾದಿ ತೆಗೆದುಕೊಳ್ಳುವವರು ಅಷ್ಟು ಹೊತ್ತಿನವರೆಗೆ ತೆಗೆದುಕೊಳ್ಳಬಹುದು.

ಬಸುರಿಯರು, ಬಾಣಂತಿಯರು, ಹತ್ತು ವರ್ಷದ ಒಳಗಿನ ಮಕ್ಕಳು, ಎಂಭತ್ತು ವರ್ಷ ದಾಟಿದ ವೃದ್ಧರು, ವಯಸ್ಸಿನಲ್ಲಿದ್ದರೂ ಅನಾರೋಗ್ಯದಲ್ಲಿರುವವರು ಇವರೆಲ್ಲರೂ ಅಶಕ್ತರು. ರಾತ್ರಿ ಹತ್ತರೊಳಗೆ ತಿಂದು ಮಲಗುವದು ಒಳ್ಳೆಯದು.

ಶನಿವಾರ ರಾತ್ರಿ ಹೆಚ್ಚಿನ ಹೊತ್ತಿನವರೆಗೆ ಎದ್ದು ನಿದ್ರೆಯನ್ನು ಕೆಡಬೇಡಿ. ಗ್ರಹಣ ಕಾಲ ಸಾಧನೆಗೆ ಅತ್ಯಂತ ಶ್ರೇಷ್ಠವಾದದ್ದು. ಆ ಕಾಲದಲ್ಲಿ ಆಯಾಸವಾಗಿದ್ದರೆ, ನಿದ್ರೆ ಕಾಡಿಸಿದರೆ ಸಾಧನೆ ಮಾಡಲಾಗುವದಿಲ್ಲ. ಹೀಗಾಗಿ ಶನಿವಾರ ರಾತ್ರಿ ಚನ್ನಾಗಿ ನಿದ್ರೆ ಮಾಡತಕ್ಕದ್ದು.

ಮೇಲೆ ಹೇಳಿದ ಅತ್ಯಂತ ಅಶಕ್ತರು, ಭಾನುವಾರ ಬೆಳಿಗ್ಗೆ 7-30 ರ ವರೆಗೆ ಹಾಲು ಹಣ್ಣು ಇತ್ಯಾದಿ ಫಲಾಹಾರ ಮಾಡಬಹುದು. ಆದಷ್ಟು ಬೇಯಿಸಿದ್ದು ತಿನ್ನುವದು ಬೇಡ.

## ಅಮಾವಾಸ್ಯಾ ಶ್ರಾದ್ಧ, ತರ್ಪಣ

20ನೆಯ ತಾರೀಕು ಶನಿವಾರವೇ ದರ್ಶವಿದೆ. ಹೀಗಾಗಿ ಅಮಾವಾಸ್ಯೆಯ ನಿಮಿತ್ತ ತರ್ಪಣ ನೀಡುವವರು ಶನಿವಾರ ತಿಲತರ್ಪಣವನ್ನು ನೀಡಿ ರಾತ್ರಿ ಫಲಾಹಾರ ಮಾಡಬೇಕು.

ಜ್ಯೇಷ್ಠ ಕೃಷ್ಣ ಅಮಾವಾಸ್ಯೆಯಂದು ಮೃತರಾದವರ ಶ್ರಾದ್ಧವನ್ನು 20ನೇ ತಾರೀಕು ಶನಿವಾರದಂದು ಮಾಡಬೇಕು. ಶ್ರಾದ್ಧ ತಿಲತರ್ಪಣ ಮಾಡದವರು ಶನಿವಾರ ರಾತ್ರಿ ಊಟವನ್ನು ಮಾಡಬಹುದು.

## ಪ್ರತಿಪದಾ ಶ್ರಾದ್ಧ

21/06/2020 ರಂದು ಅಮಾವಾಸ್ಯಾ ಮತ್ತು ಪ್ರತಿಪದಾ ಎರಡೂ ತಿಥಿಗಳಿವೆ. ಎಲ್ಲ ಸಂಕಲ್ಪಗಳಿಗೆ ಅಮಾವಾಸ್ಯೆ, ಶ್ರಾದ್ಧಕ್ಕೆ ಪ್ರತಿಪದಾ. ಆಷಾಢ ಶುಕ್ಲ ಪ್ರತಿಪದೆ ಮೃತರಾದವರ ಶ್ರಾದ್ಧವನ್ನು 21ನೇ ತಾರೀಕು ಭಾನುವಾರ ಮಾಡಬೇಕು. ಗ್ರಹಣ ಮುಗಿದ ನಂತರ ಬೇಗನೇ ಸ್ನಾನ, ಪೂಜೆಗಳನ್ನು ಮುಗಿಸಿ ಶ್ರಾದ್ಧವನ್ನು ಮಾಡಬೇಕು.

## ಶನಿವಾರ ರಾತ್ರಿಯ ಕಾರ್ಯಗಳು

ಶನಿವಾರ ಸಾಯಂಕಾಲವೇ ಎಲ್ಲ ಪದಾರ್ಥಗಳ ಮೇಲೆ ದರ್ಭೆಗಳನ್ನು ಹಾಕಬೇಕು.

ದರ್ಭೆ ದೊರೆಯದಿದ್ದಲ್ಲಿ, ತುಳಸೀ ಮೃತ್ತಿಕೆ ಅಥವಾ ಗೋಮಯಗಳನ್ನು ಹಾಕತಕ್ಕದ್ದು.

ಶನಿವಾರ ತರ್ಪಣ ಶ್ರಾದ್ಧ ಮಾಡಿದವರು ರಾತ್ರಿ ಊಟ ಮಾಡಬಾರದು. ಫಲಾಹಾರ ಮಾಡಬೇಕು.

ಉಳಿದವರು ರಾತ್ರಿ ಹತ್ತು ಗಂಟೆಯ ಒಳಗೆ ಊಟ ಮಾಡತಕ್ಕದ್ದು. 10:04 ರ ನಂತರ ನೀರನ್ನೂ ಕುಡಿಯತಕ್ಕದ್ದಲ್ಲ.

## ಭಾನುವಾರ ಬೆಳಿಗ್ಗೆ

ಎಂದಿನಂತೆ ಪ್ರಾತಃಕಾಲದಲ್ಲೆದ್ದು ಸ್ನಾನ ಸಂಧ್ಯಾವಂದನೆ ಮಾಡಬೇಕು.

ವೇಧ ಇರುವದರಿಂದ ಪೂಜೆ ಮಾಡಲು ಬರುವದಿಲ್ಲ.

ನಿರ್ಮಾಲ್ಯ ವಿಸರ್ಜನೆಯನ್ನು ಮಾಡಬೇಕು. ಒಮ್ಮೆ ಅಭಿಷೇಕ ಮಾಡಬಹುದು. ಆದರೆ, ಆ ತೀರ್ಥವನ್ನು ಸ್ವೀಕಾರ ಮಾಡಬಾರದು.

ಈ ಬಾರಿ ಮೂರು ಗಂಟೆಗಳ ಕಾಲ ಗ್ರಹಣ ಇರುವದರಿಂದ ಒದ್ದೆ ಬಟ್ಟೆಯಲ್ಲಿ ಕೂಡುವದು ಬೇಡ. ಹೀಗಾಗಿ ಬೆಳಿಗ್ಗೆ ಸ್ನಾನ ಮಾಡಿದಾಗಲೇ ಗ್ರಹಣ ಕಾಲದಲ್ಲಿ ಉಡಲಿಕ್ಕಾಗಿ ಬಟ್ಟೆಯನ್ನು ಒಣಹಾಕಿಕೊಳ್ಳತಕ್ಕದ್ದು. ಅಥವಾ ಗ್ರಹಣಕಾಲದಲ್ಲಿಯೇ ಒಣಗಿಸಿಕೊಂಡು ಉಡಬಹುದು. ಅಂತೂ ದೀರ್ಘಕಾಲ ಒದ್ದೆ ಬಟ್ಟೆ ಉಡುವದು ಬೇಡ.

## ಗ್ರಹಣದ ಕಾಲದಲ್ಲಿ

ಗ್ರಹಣಕಾಲದಲ್ಲಿ ತಿನ್ನುವದು, ಕುಡಿಯುವದು, ಮಲಗುವದು, ಮೈಥುನ ಇವೆಲ್ಲವೂ ಅತೀ ಘೋರ ಪರಿಣಾಮವನ್ನು ಉಂಟು ಮಾಡುತ್ತವೆ. ಹೀಗಾಗಿ ಮೊದಲೇ ಎಚ್ಚರದಲ್ಲಿರತಕ್ಕದ್ದು.

ಗ್ರಹಣಕಾಲದಲ್ಲಿ ನಿದ್ರೆ ಮಾಡಿದಲ್ಲಿ ಬುದ್ಧಿಮಾಂದ್ಯ ಉಂಟಾಗುತ್ತದೆ.

ಗ್ರಹಣಕಾಲದಲ್ಲಿ ತಿಂದರೆ ಕುಡಿದರೆ ಅತಿಯಾದ ಅನಾರೋಗ್ಯವುಂಟಾಗುತ್ತದೆ.

ಗ್ರಹಣಕಾಲದಲ್ಲಿ ಮೈಥುನ ಆಚರಿಸಿದರೆ ಪರಿಹಾರವಾಗದ ರೋಗಗಳು ಬರುತ್ತವೆ, ಆ ಸಂದರ್ಭದಲ್ಲಿ ಗರ್ಭ ಧರಿಸಿದರೆ ಅಂಗವಿಕಲ ಮಕ್ಕಳು, ವಿಕಾರ ರೂಪದ, ವಿಕೃತ ಬುದ್ಧಿಯ ಮಕ್ಕಳು ಹುಟ್ಟುತ್ತಾರೆ. ಎಚ್ಚರವಿರಲಿ.

## ಸ್ನಾನ

ಗ್ರಹಣಕಾಲದಲ್ಲಿ ನದೀಸ್ನಾನ, ಸಮುದ್ರಸ್ನಾನ ಅತ್ಯಂತ ಶ್ರೇಷ್ಠ. ಸಾಧ್ಯವಾದಷ್ಟು ನದಿ-ಸಮುದ್ರಗಳಿಗೆ ತೆರಳಿ ಅನುಷ್ಠಾನ ಮಾಡಲು ಪ್ರಯತ್ನ ಪಡಬೇಕು.

ಬೆಳಿಗ್ಗೆ 10:04 ಕ್ಕೆ ಸೂರ್ಯನಿಗೆ ಗ್ರಹಣವಾಗುತ್ತದೆ. ಅತ್ತ ಗ್ರಹಣವಾಗುತ್ತಿರುವಂತೆ ನಾವು ಸ್ನಾನ ಮಾಡಬೇಕು.

**ಗ್ರಹಣ ಆರಂಭವಾಗಿ ಸ್ವಲ್ಪ ಹೊತ್ತಾದ ಬಳಿಕ ಸ್ನಾನ ಮಾಡಿದರಾಯಿತು ಎಂದು ಕೂಡಬೇಡಿ.** ಗ್ರಹಣ ಹಿಡಿಯುವದಕ್ಕಿಂತ ಮುಂಚೆ ಸ್ನಾನಕ್ಕೆ ಸಿದ್ಧರಾಗಿರಿ, ನದೀ-ಸಮುದ್ರಗಳಲ್ಲಿರಿ. ಅತ್ತ ಗ್ರಹಣವಾಗುತ್ತಿದ್ದಂತೆ ಇತ್ತ ಸ್ನಾನ ಮಾಡಿದರೆ ಇತರ ಸ್ನಾನಕ್ಕಿಂತ ಲಕ್ಷಪಟ್ಟು ಮಿಗಿಲಾದ ಪುಣ್ಯ ಬರುತ್ತದೆ ಎಂದು ವೇದವ್ಯಾಸದೇವರು ವ್ಯಾಸಸ್ಮೃತಿಯಲ್ಲಿ ತಿಳಿಸುತ್ತಾರೆ —

**ಸ್ನಾನಂ ಲಕ್ಷಗುಣಂ ಪ್ರೋಕ್ತಂ**
**ಸ್ಪರ್ಶಕಾಲೇ ಯದಾ ಭವೇತ್**

ಮತ್ತೊಮ್ಮೆ ಹೇಳುತ್ತೇನೆ. ಸ್ನಾನ ಮಾಡಿ ಒದ್ದೆ ಬಟ್ಟೆಯಲ್ಲಿ ಕೂಡಬೇಡಿ. ಮೂರು ಗಂಟೆಗಳ ಕಾಲದ ದೀರ್ಘಕಾಲದ ಗ್ರಹಣ ಇರುವದರಿಂದ ಒಣಗಿದ ಶುದ್ಧ ಬಟ್ಟೆಯನ್ನುಟ್ಟು ಜಪ ಪಾರಾಯಣಗಳನ್ನು ಮಾಡತಕ್ಕದ್ದು. ಹಗಲಿನ ಹೊತ್ತು ಗ್ರಹಣವಾಗುತ್ತಿರುವದರಿಂದ ಸ್ನಾನ ಮಾಡಿದ ತಕ್ಷಣ ಅದೇ ಬಟ್ಟೆಯನ್ನು ಒಣಗಿಹಾಕಿದರೂ ಅರ್ಧ ಮುಕ್ಕಾಲು ಗಂಟೆಯಲ್ಲಿ ಬಟ್ಟೆಗಳು ಒಣಗುತ್ತವೆ. ಅಪರಕ್ರಿಯೆಗಳಲ್ಲಿ ಮಾತ್ರ ಒದ್ದೆ ಬಟ್ಟೆಯುಡಬೇಕು. ಬೇರೆ ಸಂದರ್ಭಗಳಲ್ಲಿ ಉಟ್ಟು ಅನುಷ್ಠಾನ ಮಾಡಬಾರದು.

ಗ್ರಹಣ ಆರಂಭವಾಗುತ್ತಿದ್ದಂತೆ ಸ್ನಾನ. ಸ್ನಾನವಾದ ತಕ್ಷಣ ಗೋಪೀಚಂದನ ಮುದ್ರೆಗಳನ್ನು ಧರಿಸಿ ಒಣಗಿದ ಬಟ್ಟೆಯನ್ನುಟ್ಟು ಪಾರಾಯಣ ಆರಂಭಿಸಿ.

ರಾಯರ ಸ್ತೋತ್ರ, ವಾಯುಸ್ತುತಿ ವಿಷ್ಣುಸಹಸ್ರನಾಮಗಳ ಪಾರಾಯಣಕ್ಕೆ ಒಂದು ಗಂಟೆಯ ಸಮಯ ಬೇಕಾಗುತ್ತದೆ.

ಮುಖ್ಯವಾಗಿ ಗ್ರಹಣಕಾಲದಲ್ಲಿ ದಿಗಭಿಮಾನಿ ದೇವತೆಗಳ ಪ್ರಾರ್ಥನೆಯನ್ನು ಮಾಡಬೇಕು. ಆ ಮಂತ್ರಗಳು ಮತ್ತು ಅರ್ಥವನ್ನು ಕೆಳಗಿನ ಲೇಖನದಲ್ಲಿ ನೀಡಲಾಗಿದೆ.

ಗ್ರಹಣಕಾಲದಲ್ಲಿ ದಿಗ್ದೇವತೆಗಳ ಪ್ರಾರ್ಥನೆ

vishwanandini.com/fullarticle.php?serialnumber=VNA005

ಗ್ರಹಣಕಾಲದಲ್ಲಿ ಪೂಜೆಯ ನಿಯಮವಿಲ್ಲ. ಆದರೆ, ಸಾಲಿಗ್ರಾಮಾದಿಗಳಿಗೆ ಅಭಿಷೇಕವನ್ನು ಮಾಡತಕ್ಕದ್ದು. ನಾವು ಸ್ವೀಕರಿಸಬಾರದು.

ಆ ಅಭಿಷೇಕದ ಜಲದಿಂದಲೇ ಪಿತೃಗಳಿಗೆ ತರ್ಪಣವನ್ನು ನೀಡಬೇಕು. ಅಭಿಷೇಕ ಮಾಡಿಕೊಳ್ಳಲು ಸಾಧ್ಯವಿಲ್ಲದಿದ್ದರೆ ನದಿಯ ನೀರಿನಿಂದಲೇ ಅಥವಾ ಶುದ್ಧಜಲದಿಂದಲೇ ನೀಡಿ.

ಸಾಲಿಗ್ರಾಮ-ಪ್ರತಿಮೆಗಳಿಗೆ ಅಭಿಷೇಕ ಮಾಡಿ ಪೂರ್ಣವಾಗಿ ವರೆಸಿ ಇಡಬೇಕು. ಒದ್ದೆಯ ಅಂಶ ಇರಬಾರದು.

ಧ್ಯಾನ ಮಾಡುವವರಿಗೆ ಅನುಕೂಲವಾಗಲಿ ಎಂದು ಶ್ರೀಮದಾಚಾರ್ಯರು ತಿಳಿಸಿದ ಕ್ರಮದಲ್ಲಿ ಧ್ಯಾನದ ನಿರೂಪಣೆ ಇರುವ ಉಪನ್ಯಾಸ ವಿಶ್ವನಂದಿನಿಯಲ್ಲಿ ಉಪಲಬ್ಧವಿದೆ. Link —

[ಮಧ್ವಶಾಸ್ತ್ರದ ಪ್ರಕಾರ ಧ್ಯಾನ ಮಾಡುವ ಕ್ರಮ](http://vishwanandini.com/fullupanyasa.php?serialnumber=VNU531)

http://vishwanandini.com/fullupanyasa.php?serialnumber=VNU531

ಆ ನಂತರ ಭಾಗವತದಲ್ಲಿನ ವಿರಾಡ್ರೂಪದ ಚಿಂತನೆಯ ಪ್ರವಚನವನ್ನು ಆಲಿಸಿ. ದೇವರು ಸರ್ವವ್ಯಾಪಿ, ಸರ್ವನಿಯಾಮಕ ಎಂಬ ಚಿಂತನೆಗಳು ಮಹಾಫಲಪ್ರದವಾದದ್ದು.

[ವಿರಾಡ್ರೂಪದ ವರ್ಣನೆ](http://vishwanandini.com/fullupanyasa.php?serialnumber=VNU677)

http://vishwanandini.com/fullupanyasa.php?serialnumber=VNU677

ಆ ಬಳಿಕ ಮನೆಯವರೆಲ್ಲ ಕೂಡಿ ದೇವರ ನಾಮಗಳನ್ನು ಹಾಡಿ.

## ಶ್ರಾದ್ಧ, ತರ್ಪಣ

ಆ ಬಳಿಕ ಅಧಿಕಾರ ಇರುವವರು ಸರ್ವಪಿತೃಗಳಿಗೂ ಎಳ್ಳಿನಿಂದ ತರ್ಪಣವನ್ನು ನೀಡಿ.

ಗ್ರಹಣಕಾಲದಲ್ಲಿ ನಿರ್ಮಾಲ್ಯತೀರ್ಥವನ್ನು ಮಾಡಿದ್ದಲ್ಲಿ ಆ ನಿರ್ಮಾಲ್ಯತೀರ್ಥದಿಂದಲೇ ತರ್ಪಣ ನೀಡಿ.

ಇಲ್ಲದಿದ್ದಲ್ಲಿ ನದಿಯ ನೀರಿನಿಂದ, ಅಥವಾ ಶುದ್ಧವಾದ ನೀರಿನಿಂದ ತರ್ಪಣ ನೀಡಿ.

ಗ್ರಹಣಕಾಲದಲ್ಲಿ ಮಾಡುವ ಶ್ರಾದ್ಧವನ್ನು ಶಾಸ್ತ್ರಗಳು ಅತ್ಯಂತ ಪ್ರಶಂಸೆ ಮಾಡುತ್ತವೆ. ಪಿತೃಗಳಿಗೆ ಅತ್ಯಂತ ಪ್ರಿಯಕರವಾಗುತ್ತದೆ.

ಗ್ರಹಣಕಾಲದಲ್ಲಿ ಅನ್ನದಿಂದ ಪಿಂಡಪ್ರದಾನ ಮಾಡಬಾರದು. ಗೋಧಿಯ ಹಿಟ್ಟಿನ ಪಿಂಡ, ಅಥವಾ ಬಂಗಾರದ ಕಡ್ಡಿಗಳನ್ನು ಪಿಂಡದ ಸ್ಥಾನದಲ್ಲಿಟ್ಟು ಶ್ರಾದ್ಧ ಮಾಡಬೇಕು. ಮಹಾಲಯದಲ್ಲಿ ಮಾಡುವಂತೆ ಸರ್ವಪಿತೃಗಳಿಗೂ

ಮಾಡಬೇಕು. ಕೇವಲ ತಂದೆ, ತಾಯಿಯರಿಗೆ ಮಾಡಬಾರದು.

ಇನ್ನು ಶ್ರಾದ್ಧ ಮಾಡಲು ಸಾಧ್ಯವಿಲ್ಲದವರು ಶ್ರಾದ್ಧದ ಬದಲಾಗಿ ಬೆಳ್ಳಿಯ ಯಾವುದಾದರೂ ವಸ್ತುವನ್ನು ಯೋಗ್ಯರಿಗೆ ದಾನ ಮಾಡಬಹುದು.

## ದಾನ

ಗ್ರಹಣ ಆರಂಭವಾಗುತ್ತಿದ್ದಂತೆ ದಾನ ಮಾಡಬೇಡಿ. ಗ್ರಹಣದ ಮಧ್ಯದಲ್ಲಿಯೂ ದಾನ ಮಾಡಬೇಡಿ. ಗ್ರಹಣ ಇನ್ನೇನು ಬಿಡುತ್ತದೆ ಎನ್ನುವಾಗ ದಾನವನ್ನು ಮಾಡಿ. ಗ್ರಹಣದ ಮೋಕ್ಷಕಾಲಕ್ಕೆ ಮಾಡುವ ದಾನ ಅನಂತ ಫಲವನ್ನು ನೀಡುತ್ತದೆ ಎಂದು ವ್ಯಾಸಸ್ಮೃತಿ ತಿಳಿಸುತ್ತದೆ —

**"ಮೋಕ್ಷಕಾಲೇ ಭವೇದ್ ದಾನಮನಂತಮ್"**

ದಾನ ಯಾವಾಗಲೂ ಯಥಾಶಕ್ತಿಯಾಗಿರಬೇಕು. ಶಕ್ತಿ ಮೀರಿಯೂ ದಾನ ಮಾಡಬಾರದು. ಜಿಪುಣತನವನ್ನೂ ತೋರಬಾರದು.

ಯಾವ ಪದಾರ್ಥವನ್ನು ಗ್ರಹಣಕಾಲದಲ್ಲಿ ಮುಟ್ಟಿದರೆ ಮತ್ತೆ ಉಪಯೋಗಿಸಲು ಸಾಧ್ಯವಿಲ್ಲವೋ ಅಂತಹ ಧಾನ್ಯ, ಹಾಲು ಮೊಸರು ಮುಂತಾದವನ್ನು ದಾನ ನೀಡತಕ್ಕದ್ದಲ್ಲ. ಧಾನ್ಯದ ದಾನ ನೀಡುವದಾದರೆ ಸಂಕಲ್ಪಿಸಿ ಗ್ರಹಣ ಮುಗಿದ ಮೇಲೆ ಸ್ನಾನ ಮಾಡಿ

ನೀಡತಕ್ಕದ್ದು. ಗ್ರಹಣ ಕಾಲದಲ್ಲಿ ಮುಟ್ಟಿ ನೀಡಬಾರದು.

ದೇವರು ಕೊಟ್ಟಷ್ಟು ಸೌಭಾಗ್ಯದಲ್ಲಿ ಹಣ, ಬೆಳ್ಳಿ ಮುಂತಾದವುಗಳ ರೂಪದಲ್ಲಿ ಯಥಾಶಕ್ತಿ ದಾನ ಮಾಡತಕ್ಕದ್ದು.

**ದಾನ ಸ್ವೀಕರಿಸಲು ಬ್ರಾಹ್ಮಣರಿಲ್ಲದೇ ಇದ್ದಲ್ಲಿ ಇಂತಹವರಿಗೆ ನೀಡುತ್ತೇನೆ ಎಂದು ಆ ಕಾಲದಲ್ಲಿಯೇ ಸಂಕಲ್ಪ ಮಾಡಿ, ಆ ನಂತರ ಅವರಿಗೆ ತಲುಪಿಸಿ.**

## ಸಂಕಲ್ಪ ಸಮರ್ಪಣೆ

ಗ್ರಹಣಕಾಲದ ಎಲ್ಲ ಸ್ನಾನ, ಜಪ, ದಾನಗಳಿಗೆ ಮಾಡಬೇಕಾದ ಸಂಕಲ್ಪ, ಸಮರ್ಪಣೆಗಳ ವಿಧಿಯನ್ನು ಕೆಳಗಿನ ಲೇಖನದಲ್ಲಿ ವಿವರಿಸಿದ್ದೇನೆ.

---

ಗ್ರಹಣದ ಸಂಕಲ್ಪ ಮತ್ತು ಸಮರ್ಪಣೆ

http://vishwanandini.com/fullarticle.php?serialnumber=VNA270

---

## ಗ್ರಹಣದ ಫಲಾಫಲಗಳು

ಕಳೆದ  ಬಾರಿಯ ಗ್ರಹಣ ಸಕಲರಿಗೂ ತೊಂದರೆಯನ್ನುಂಟು ಮಾಡಿತ್ತು. ಈ ಗ್ರಹಣ ಕಳೆದ ಗ್ರಹಣದಿಂದ ಉಂಟಾದ ದೋಷಗಳನ್ನು ಪರಿಹಾರ ಮಾಡುತ್ತದೆ. ಆದರೆ ಗ್ರಹಣ ಮುಗಿಯುವವರೆಗೆ ದೋಷಗಳಿರುತ್ತವೆ.

**ಗ್ರಹಣಫಲವಾಗಲೀ, ವರ್ಷಭವಿಷ್ಯವಾಗಲೀ ಎಲ್ಲವೂ ಸಾಮಾನ್ಯ ಫಲಗಳು. ಜಾತಕದಲ್ಲಿನ ಗ್ರಹ ಪರಿಸ್ಥಿತಿ ದಶಾ ಭುಕ್ತಿಗಳ ಮೇಲೆ ನಿರ್ದಿಷ್ಟ ಫಲಗಳು ದೊರೆಯುತ್ತವೆ. ಮುಖ್ಯವಾಗಿ ಯಾರ ಜಾತಕದಲ್ಲಿ ರವಿ, ಬುಧ, ರಾಹುಗಳು ಪ್ರಬಲರಾಗಿದ್ದಾರೆಯೋ ಅವರಿಗೆ ಈ ಗ್ರಹಣದಿಂದ ಯಾವ ದುಷ್ಪರಿಣಾಮವೂ ಉಂಟಾಗುವದಿಲ್ಲ. ಯಾರ ಜಾತಕದಲ್ಲಿ ಅವರು ದುರ್ಬಲರಾಗಿದ್ದರೂ ಉಂಟಾಗುವ ಶುಭಫಲಗಳೂ ಕಡಿಮೆಯಾಗುತ್ತವೆ.**

ಇನ್ನು ಆಗುವ ದುಷ್ಪರಿಣಾಮಗಳನ್ನು ಕಡಿಮೆ ಮಾಡಿಕೊಳ್ಳುವ, ಸತ್ಪರಿಣಾಮಗಳನ್ನು ಹೆಚ್ಚು

ಮಾಡಿಕೊಳ್ಳುವ ಸುಲಭೋಪಾಯ ಸಕಲಗ್ರಹಬಲನಾದ ಶ್ರೀಹರಿಯ ಆರಾಧನೆ. “ನ ವಾಸುದೇವಭಕ್ತಾನಾಂ ಅಶುಭಂ ವಿದ್ಯತೇ ಕ್ವಚಿತ್” ಎಂಬ ವೇದವ್ಯಾಸದೇವರ ವಚನ ನಮ್ಮ ರಕ್ಷಾಕವಚ. ಶ್ರೀಹರಿಯ ಭಕ್ತರಿಗೆ ಬರುವ ಕಷ್ಟಗಳೂ ಮಹಾಸತ್ಫಲವನ್ನೇ ನೀಡಿ ಹೋಗುತ್ತವೆ, ಚಿಂತೆ ಬೇಡ.

**ಮೇಷ ರಾಶಿ ಮೇಷ ಲಗ್ನದಲ್ಲಿ ಹುಟ್ಟಿರುವವರಿಗೆ** ಬಹುತೇಕ ಶುಭಫಲಗಳಿವೆ. ಆದರೆ  ಅವರ ಅಣ್ಣ ತಮ್ಮಂದಿರಿಗೆ ಅಕ್ಕತಂಗಿಯರಿಗೆ ತೊಂದರೆಯುಂಟಾಗುತ್ತದೆ.  ಅಥವಾ ಅವರಿಂದಲೇ ನಿಮಗೆ ತೊಂದರೆಯಾಗುತ್ತದೆ.

**ವೃಷಭರಾಶಿ ಅಥವಾ ವೃಷಭ ಲಗ್ನದಲ್ಲಿ ಹುಟ್ಟಿರುವವರಿಗೆ** ಕುಟುಂಬದಲ್ಲಿ ವೃಥಾಕಲಹ ಉಂಟಾಗುತ್ತದೆ. ಧನಾಗಮವೂ ಇದೆ. ಕೆಲವರಿಗೆ ಹಣದ ವಿಷಯದಲ್ಲಿ ತೊಂದರೆ, ಆದರೆ ಕುಟುಂಬದಲ್ಲಿ ಪೂರ್ಣ ಸೌಖ್ಯವಿರುತ್ತದೆ.

**ಮಿಥುನ ರಾಶಿ ಅಥವಾ ಮಿಥುನ ಲಗ್ನದಲ್ಲಿ ಹುಟ್ಟಿರುವವರಿಗೆ** ದೇಹಕ್ಕೆ ಪೆಟ್ಟು ಬೀಳುವ ಸಾಧ್ಯತೆ ಇರುತ್ತದೆ. ವಿಪರೀತ ಕೋಪ. ಬುದ್ಧಿ ಸ್ಥಿಮಿತದಲ್ಲಿರುವದಿಲ್ಲ. ಸುಮ್ಮಸುಮ್ಮನೇ ಅಳುವಂತಾಗುತ್ತದೆ. ಮನಸ್ಸಿನಲ್ಲಿ ದುಗುಡ. ಆದಷ್ಟೂ ಪ್ರಯಾಣವನ್ನು ಮಾಡಬೇಡಿ.

**ಕರ್ಕ ರಾಶಿ ಅಥವಾ  ಕರ್ಕ ಲಗ್ನದಲ್ಲಿ ಹುಟ್ಟಿರುವವರಿಗೆ** ವಿಪರೀತ ಖರ್ಚಾಗುತ್ತದೆ. ಸಾಲದ ಯೋಚನಯನ್ನೂ ಮಾಡಬೇಡಿ. ಎಷ್ಟು ಅನಿವಾರ್ಯವಾದರೂ ಸಾಲ ತೆಗೆದುಕೊಳ್ಳಬೇಡಿ. ಋಣಮೋಚನ ಸ್ತೋತ್ರವನ್ನು ಪಠಿಸಿ. ಯಾವುದೇ ಖರ್ಚನ್ನೂ ಯೋಚನೆ ಮಾಡಿ ಮಾಡಿ.

**ಸಿಂಹರಾಶಿಯಲ್ಲಿ ಅಥವಾ ಸಿಂಹಲಗ್ನದಲ್ಲಿ** ಹಿಂದಿನ ಸಾಲಗಳು ಹಿಂತಿರುಗುವ ಸಾಧ್ಯತೆಯಿದೆ. ನೀವು ಸಾಲ ಮಾಡಿದ್ದರೆ ಸಾಲ ತೀರಿಸಲು ಆರಂಭಿಸುತ್ತೀರಿ. ಆದರೆ ಮನಸ್ಸಿನಲ್ಲಿ ತಳಮಳ ಇರುತ್ತದೆ.

**ಕನ್ಯಾರಾಶಿ ಅಥವಾ ಕನ್ಯಾಲಗ್ನದಲ್ಲಿ** ಹುಟ್ಟಿದವರಿಗೆ ಗ್ರಹಣದಿಂದ ಸತ್ಫಲವಿದೆ. ಕೆಲಸ ಕಾರ್ಯಗಳಲ್ಲಿ ಜಯವುಂಟು. ಆದರೆ ಬುಧ ಪೀಡಿತನಾಗಿರುವದರಿಂದ ನಿಮ್ಮ ಮನಸ್ಸು ಬುದ್ಧಿ ಕಲುಷಿತವಾಗುತ್ತದೆ. ಮತ್ತೊಬ್ಬರಿಗೆ ಕೇಡನ್ನು ಬಯಸುತ್ತೀರಿ. ಅದಕ್ಕಾಗಿ ಪ್ರಯತ್ನವನ್ನೂ ಪಡುತ್ತೀರಿ. ಆದರೆ ಅದರ ದುಷ್ಫಲ ನಿಮ್ಮ ಮೇಲೆಯೇ ಉಂಟಾಗುತ್ತದೆ. ಮನಸ್ಸಿನ ಶುದ್ಧಿಗಾಗಿ ರುದ್ರದೇವರ ಸ್ತೋತ್ರ ಮಾಡಿ.

**ತುಲಾರಾಶಿ ತುಲಾಲಗ್ನದಲ್ಲಿ ಹುಟ್ಟಿದವರಿಗೆ**
ಕೆಲಸಕಾರ್ಯಗಳಲ್ಲಿ ತೊಂದರೆಯುಂಟಾಗುತ್ತದೆ. ವಿಪರೀತ ಖರ್ಚು. ನಿಮ್ಮ ತಂದೆಯವರ ಅನಾರೋಗ್ಯದ ಸೂಚನೆಯಿದೆ. ಆದರೆ, ನೀವು ನಿರೀಕ್ಷಿಸದ ಮೂಲದಿಂದ ನಿಮಗೆ ಧನಾಗಮವಾಗುತ್ತದೆ. ಸಮಸ್ಯೆಗಳು ಬೇಗ ಪರಿಹಾರವಾಗುತ್ತವೆ.

**ವೃಶ್ಚಿಕ ರಾಶಿ ಅಥವಾ ವೃಶ್ಚಿಕ ಲಗ್ನದಲ್ಲಿ ಹುಟ್ಟಿದವರಿಗೆ** ಅನಾರೋಗ್ಯ ಅಧಿಕವಾಗುತ್ತದೆ. ಹಣದ ಖರ್ಚು. ಸುಮ್ಮಸುಮ್ಮನೇ

ಜಗಳವಾಗುತ್ತದೆ. ಮಾತು ಮನಸ್ಸಿನ ಮೇಲೆ ಹಿಡಿತವಿರಲಿ.

## ಧನೂರಾಶಿ ಅಥವಾ ಧನುರ್ಲಗ್ನದಲ್ಲಿ

ಹುಟ್ಟಿದವರಿಗೆ ಸಂಗಾತಿಯೊಡನೆ, ಅಥವಾ ಪಾಲುದಾರರೊಡನೆ ಜಗಳ. ಆದರೆ ಬಹುಬೇಗ ಪರಿಹಾರವಾಗುತ್ತದೆ. ಈ ವರ್ಷ ಮಹತ್ತರ ಸಂಪತ್ತನ್ನು ಪಡೆಯುವ ಯೋಗವಿದೆ, ಅದರೆ ಅದನ್ನು ಪಡೆಯಬೇಕಾದರೆ ಶನಿಸ್ತೋತ್ರವನ್ನು ಮಾಡತಕ್ಕದ್ದು. ನರಸಿಂಹ ಮುಖ್ಯಪ್ರಾಣದೇವರ ದರ್ಶನ ಸೇವೆಗಳನ್ನು ಮಾಡತಕ್ಕದ್ದು.

## ಮಕರ ರಾಶಿ ಮತ್ತು ಮಕರ ಲಗ್ನದಲ್ಲಿ

ಹುಟ್ಟಿರುವವರಿಗೆ ಬೆಟ್ಟದಂತಹ ಕಷ್ಟ ಬಂದು ಗಾಳಿಯಂತೆ ಹಾರಿಹೋಗುತ್ತದೆ. ಎಂತಹ ಸಮಸ್ಯೆಯಾದರೂ ಅದರಿಂದ ಪಾರಾಗುತ್ತೀರಿ. ಚಿಂತೆ ಬೇಡ.

## ಕುಂಭರಾಶಿ ಮತ್ತು ಕುಂಭಲಗ್ನದಲ್ಲಿ ಹುಟ್ಟಿದವರ

ಮಕ್ಕಳ ಆರೋಗ್ಯ  ಹಣಕಾಸು ಪರಿಸ್ಥಿತಿಗೆ ತೊಂದರೆಯಾಗುವ ಸಾಧ್ಯತೆಯಿದೆ. ನಿಮ್ಮನ್ನು

ಸದಾ ಮನೋವ್ಯಥೆ ಕಾಡುತ್ತದೆ.
ನರಸಿಂಹಸ್ತೋತ್ರ ಪಠಿಸಿ..

## ಮೀನರಾಶಿ ಮತ್ತು ಮೀನಲಗ್ನದಲ್ಲಿ ಹುಟ್ಟಿದವರಿಗೆ

ವಾಹನಗಳಿಂದ ಮತ್ತು ತಾಯಿಯ ಸಂಬಂಧಿಕರಿಂದ ತೊಂದರೆ ಉಂಟಾಗುವ ಸಾಧ್ಯತೆಯಿದೆ. ಕಾಲಿಗೆ ಅಥವಾ ಮೂಳೆಗಳಿಗೆ ಪೆಟ್ಟಾಗುವ ಸಾಧ್ಯತೆಯಿದೆ. ಜಾಗ್ರತೆಯಲ್ಲಿರಿ.

## ಪರಿಹಾರ

ಸಂಕಟ ಬಂದಾಗ ವೆಂಕಟರಮಣ ಎನ್ನದೇ ಪ್ರತೀನಿತ್ಯ ಸಾಲಿಗ್ರಾಮ ಪೂಜೆ, ವಿಷ್ಣುಸಹಸ್ರನಾಮ ಪಾರಾಯಣ, ನಮಸ್ಕಾರಗಳನ್ನು ತಪ್ಪದೇ ಮಾಡುವದರಿಂದ ಸಕಲ ಆಪತ್ತುಗಳಿಂದಲೂ ಪಾರಾಗುತ್ತವೆ.

ಶ್ರೀನರಸಿಂಹದೇವರ, ದುರ್ಗಾದೇವಿಯರ, ಮುಖ್ಯಪ್ರಾಣದೇವರ, ರುದ್ರದೇವರ, ನವಗ್ರಹಗಳ, ಗುರುಗಳ ಸ್ತೋತ್ರಗಳನ್ನು ಪಠಣ ನಮ್ಮನ್ನು ಕಾಪಾಡುವ ವಜ್ರಕವಚಗಳು.

ನಿತ್ಯ ಅಧ್ಯಯನಶೀಲರಾದ ಮತ್ತು ಗಾಯತ್ರೀಜಪಶೀಲರಾದ ಬ್ರಾಹ್ಮಣರಿಗೆ ಕಬ್ಬಿಣದ ವಸ್ತುಗಳನ್ನು ದಾನ ಮಾಡುವದರಿಂದ ಹಾಗೂ ಸಮೃದ್ಧವಾಗಿ ಅನ್ನದಾನ ಮಾಡುವದರಿಂದ, ಗೋವುಗಳಿಗೆ ಗ್ರಾಸ ನೀಡುವದರಿಂದ ಈ ದುಷ್ಫಲಗಳು ಪರಿಹಾರವಾಗುತ್ತವೆ.

ಉಪದೇಶ ಪಡೆದಿರುವ ಪುರುಷರು ಮನ್ಯುಸೂಕ್ತ, ವಾಯುಸ್ತುತಿ, ರುದ್ರಪ್ರಶ್ನದ ಪಾರಾಯಣಗಳನ್ನು ಮಾಡಿ.

ಎಲ್ಲರೂ ವಿಷ್ಣುಸಹಸ್ರನಾಮ, ನರಸಿಂಹ ಸ್ತೋತ್ರಗಳು, ಮಧ್ವನಾಮ, ಶಿವಸ್ತುತಿಗಳು, ನವಗ್ರಹಸ್ತೋತ್ರ ಮತ್ತು ಗುರುಗಳ ಸ್ತೋತ್ರಗಳು, ಮುಖ್ಯವಾಗಿ ರಾಯರ ಸ್ತೋತ್ರವನ್ನು ಪಾರಾಯಣ ಮಾಡಿ.  ಯಾವ ಸ್ತೋತ್ರ ಬರಲಿ, ಬಾರದಿರಲಿ

**ಶ್ರೀರಾಘವೇಂದ್ರತೀರ್ಥಗುರ್ವಂತರ್ಗತ ಸಮಸ್ತ ದೇವತಾಂತರ್ಗತ ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀಲಕ್ಷ್ಮೀನೃಸಿಂಹಾಯ ನಮಃ**

ಇಷ್ಟನ್ನು ನಿರಂತರವಾಗಿ ಗ್ರಹಣಕಾಲದಲ್ಲಿ ಪಠಣ ಮಾಡಿ.

ಬೆಳ್ಳಿ ಮತ್ತು ಬಂಗಾರದ ವಸ್ತುಗಳನ್ನು ದಾನ ಮಾಡಿ.

ಗ್ರಹಣಕಾಲದಲ್ಲಿ ಎಷ್ಟು ಸಾಧ್ಯವೋ ಅಷ್ಟು ನಮಸ್ಕಾರಗಳನ್ನು ಭಗವಂತನಿಗೆ, ದೇವತೆಗಳಿಗೆ, ಗುರುಗಳಿಗೆ ಸಮರ್ಪಿಸಿ.

## ದೇಶ, ಮೋದಿ, ಯೋಧರಿಗಾಗಿ ಪ್ರಾರ್ಥಿಸಿ

ನರೇಂದ್ರ ಮೋದಿ ಮತ್ತು ಅವರ ತಂಡ ಭಾರತೀಯರಿಗೆ ದೊರೆತಿರುವ ಭಾಗ್ಯಗಳಲ್ಲಿ ಒಂದು. ಇಡಿಯ ದುಷ್ಟಶಕ್ತಿಗಳನ್ನು ಎದುರು ಹಾಕಿಕೊಂಡು, ಅತ್ಯಂತ ಸೂಕ್ಷ್ಮಬುದ್ಧಿಯಿಂದ ಆಲೋಚಿಸಿ, ಭಾರತದ ಸರ್ವಾಂಗೀಣ ಏಳಿಗೆಗಾಗಿ ಶ್ರಮಿಸುತ್ತಿರುವ ಪ್ರಾಮಾಣಿಕ ವ್ಯಕ್ತಿಗಳು.

ಇಡಿಯ ಜಗತ್ತು ಕೋವಿಡ್ ಎದುರಿಸುತ್ತಿದ್ದರೆ, ಚೀನಾ ಯುದ್ಧಕ್ಕೆ ಕಾಲ್ಕೆರೆದು ಬರುತ್ತಿದೆ. ಈ ಪರಿಸ್ಥಿತಿಯ ಲಾಭವನ್ನು ಪಾಕೀಸ್ತಾನ

ತೆಗೆದುಕೊಳ್ಳದೇ ಇರುವದಿಲ್ಲ. ದೇಶದಲ್ಲಿ ಕ್ಲಿಷ್ಟ ಪರಿಸ್ಥಿತಿ ಇದೆ. ನಮ್ಮ ಪ್ರತೀದಿವಸದ ಪೂಜೆಯಲ್ಲಿ ದೇಶದ ಒಳಿತಿಗಾಗಿ, ಯೋಧರ ಉಳಿವಿಗಾಗಿ ನಮ್ಮ ಪ್ರಾರ್ಥನೆ ಇರಲೇಬೇಕು. ಇಲ್ಲದಿದ್ದರೆ ನಾವು ಪಾಪಿಗಳಾಗುತ್ತೇವೆ.

ಹೀಗಾಗಿ ಮೋದಿಯವರಿಗೆ ಮತ್ತು ಅವರ ಜೊತೆಯಲ್ಲಿರುವ ಸಮಗ್ರ ಸಜ್ಜನರಿಗೆ ಯಾವ ರೀತಿಯ ತೊಂದರೆಯಾಗದಿರಲಿ, ನಮ್ಮ ದೇಶದ ಸರ್ವಾಂಗೀಣ ಅಭಿವೃದ್ಧಿಯಾಗಲಿ ಎಂದು ದೇವರನ್ನು ಪ್ರಾರ್ಥಿಸುವದನ್ನು ಮರೆಯಬೇಡಿ. ಮರತರೆ ಅದು ನಮಗೆ ನಾವು ಮಾಡಿಕೊಳ್ಳುವ ದ್ರೋಹ. ಅವರನ್ನು ಉಳಿಸಿಕೊಳ್ಳಬೇಕಾದ್ದು ನಮ್ಮ ಕರ್ತವ್ಯ.

ಚೀನಾದ ವಸ್ತುಗಳಿಗೆ ಪೂರ್ಣ ಬಹಿಷ್ಕಾರ ಹಾಕಿ. ಸ್ವದೇಶಿ ವಸ್ತುಗಳನ್ನು ಉಪಯೋಗಿಸಲು ಆರಂಭಿಸಿ. ಬದಲಾವಣೆ ನನ್ನಿಂದಲೇ ಆರಂಭವಾಗಬೇಕು ಎನ್ನುವ ಮಂತ್ರವನ್ನು ಪಾಲಿಸೋಣ.

## ಹೋಮ ಹವನಗಳ ಕುರಿತು

ಇತ್ತೀಚೆಗೆ ಹೋಮ ಶಾಂತಿಗಳೇನೋ ಅತ್ಯಧಿಕವಾಗಿ ನಡೆಯುತ್ತವೆ. ಗ್ರಹಣಕಾಲದಲ್ಲಂತೂ ಸಾಮೂಹಿಕವಾಗಿ ಅವುಗಳ ಆಚರಣೆ ನಡೆಯುತ್ತದೆ. ಆದರೆ ಸಂತೋಷ ಪಡುವ ವಿಷಯವಲ್ಲ.

ಕಾರಣ, ಮೊದಲಿಗೆ ಹೋಮಗಳನ್ನು ಕಬ್ಬಿಣದ ಕುಂಡಗಳಲ್ಲಿ ಮಾಡುತ್ತಾರೆ. ಅಂಗಡಿಯಿಂದ ತಂದ ತುಪ್ಪ, ಶುದ್ಧವಾಗಿ ತಯಾರಾಗದ ಪದಾರ್ಥಗಳಿಂದ ಹೋಮ ಮಾಡುತ್ತಾರೆ.

ಮಂತ್ರಗಳು ಪಾರಂಪರಿಕ ಗುರುಗಳಿಂದ ಉಪದೇಶವಾಗಿರಬೇಕು, ಅವನ್ನು ನಿತ್ಯ ಪಾರಾಯಣ ಮಾಡುತ್ತ ಸಿದ್ಧಿ ಗಳಿಸಿರಬೇಕು, ಉಚ್ಚಾರಣೆಯಲ್ಲಿ ಕಿಂಚಿತ್ತೂ ತಪ್ಪಾಗಬಾರದು, ಅರ್ಥ ತಿಳಿದಿರಬೇಕು. ಇವು ಎಷ್ಟರ ಮಟ್ಟಿಗೆ ಯಜಮಾನ ಮತ್ತು ಪುರೋಹಿತರಲ್ಲಿ ಇರುತ್ತದೆ ಎನ್ನುವದು ನಮಗೆ ನಾವೇ ಪ್ರಶ್ನೆ ಮಾಡಿಕೊಂಡು ಉತ್ತರ ಪಡೆಯಬೇಕು.

ಶಾಸ್ತ್ರ ಹೇಳುವ ಕ್ರಮದಲ್ಲಿ ಹೋಮ ಮುತಾದವುಗಳನ್ನು ಮಾಡಿದಾಗ ಮಾತ್ರ ಭಗವಂತನಿಗೆ ಪ್ರಿಯವಾಗುತ್ತದೆ. ಇಲ್ಲದಿದ್ದರೆ ಆ ಎಲ್ಲ ಕ್ರಿಯೆಗಳನ್ನು ದೈತ್ಯರು ಸ್ವೀಕರಿಸಿ, ಅದು ದೈತ್ಯಾರಾಧನೆಯಾಗುತ್ತದೆ.

ನಮ್ಮಂತಹವರಿಗಾಗಿಯೇ ವೇದಗಳಲ್ಲೊಂದು ಪ್ರಾರ್ಥನೆಯಿದೆ — **"ದೇವರಿಗೆ ಪ್ರಿಯವಾಗುವ ರೀತಿಯಲ್ಲಿ ಕರ್ಮ ನಡೆಯುವದಾದರೆ ಮಾತ್ರ, ಓ ದೇವತೆಗಳೇ ನಮ್ಮಿಂದ ಕರ್ಮ ಮಾಡಿಸಿ, ಇಲ್ಲದಿದ್ದಲ್ಲಿ ನಮ್ಮಿಂದ ಸ್ತೋತ್ರವನ್ನು ಮಾಡಿಸಿ ಆ ಸ್ತೋತ್ರವನ್ನು ಸ್ವೀಕರಿಸಿ"** ಎಂದು.

ಅಶುದ್ಧವಾದ ಕ್ರಮದಲ್ಲಿ ಮಾಡುವ ಯಾವುದೇ ಕ್ರಿಯೆಯನ್ನು ಮಾಡಬಾರದು.

ನಾವು ಮಾಡುವ ಯಾವುದೇ ಕ್ರಿಯೆ ಶಾಸ್ತ್ರಸಮ್ಮತವಾಗಿದ್ದರೆ ಮಾತ್ರ ಅದು ಸಾತ್ವಿಕ ಕ್ರಿಯಯಾಗುತ್ತದೆ, ಶ್ರೀಹರಿಗೆ ಸೇರುತ್ತದೆ.

ಶಾಸ್ತ್ರಕ್ಕೆ ಅಸಮ್ಮತವಾದ ರೀತಿಯಲ್ಲಿ ಅಥವಾ ಶಾಸ್ತ್ರನಿಷಿದ್ಧವಾದ ರೀತಿಯಲ್ಲಿ ಮಾಡುವ

ಕ್ರಿಯೆಗಳು ದೈತ್ಯಾರಾಧನೆಯಾಗುತ್ತವೆ. ಅದರಿಂದ ಮಹತ್ತರ ದುಷ್ಫಲಗಳುಂಟಾಗುತ್ತವೆ.

ಹೀಗಾಗಿ ನಾವು ಮಾಡುವ ಕ್ರಿಯೆ ಮಾಡುವ ದೈತ್ಯಾರಾಧನೆ ಆಗದಂತೆ ನೋಡಿಕೊಳ್ಳುವದು ನಮ್ಮ ಕರ್ತವ್ಯ.

ಹಾಗಾದರೆ ನಮ್ಮ ಕರ್ಮವನ್ನು ಕಳೆದುಕೊಳ್ಳುವ ಬಗೆ ಹೇಗೆ?  ಸರಳವಾದ ಮಾರ್ಗವಿದೆ — ನಾವು ಮಾಡುವ ಸ್ತೋತ್ರಗಳಿಂದ, ನಮಸ್ಕಾರಗಳಿಂದಲೇ ಎಲ್ಲ ಫಲಗಳನ್ನೂ ಪಡೆಯಬಹುದು.

ಭಕ್ತಿಯಿಂದ ಮಾಡುವ ಸ್ತೋತ್ರ, ನಮಸ್ಕಾರಗಳು ನೀಡುವಷ್ಟು ಫಲವನ್ನು ಇನ್ನ್ಯಾವ ಹೋಮ, ಯಜ್ಞಗಳೂ ನೀಡಲು ಸಾಧ್ಯವಿಲ್ಲ.

## ಗ್ರಹಣದ ನಂತರ

ಗ್ರಹಣ ಮುಗಿದದ್ದನ್ನು ಕಂಡು ಸ್ನಾನವನ್ನು ಮಾಡಿ ಪೂಜೆ, ನೈವೇದ್ಯಗಳನ್ನು ಮುಗಿಸಿ ಊಟ ಮಾಡಬೇಕು.

ಗುರುಗಳಿಗೆ ಅಭಿಷೇಕವುಂಟು. ಪಂಚಾಮೃತ ಹಸ್ತೋದಕ ಇರುವದಿಲ್ಲ.

ಗ್ರಹಣ ಎನ್ನುವದು ಭಗವಂತನ ಪ್ರೀತಿಯನ್ನು ಸಂಪಾದಿಸಲಿಕ್ಕೆ ಇರುವ ಶ್ರೇಷ್ಠ ಪರ್ವ ಕಾಲ. ಭಗವಚ್ಚಿಂತನೆ, ದಾನ, ಪಾರಾಯಣಗಳಿಂದ ಅದನ್ನು ಸಾರ್ಥಕ ಮಾಡಿಕೊಳ್ಳಬೇಕು. ನಿದ್ರೆ ಮಾಡಿ ವ್ಯರ್ಥ ಮಾಡಿಕೊಳ್ಳಬಾರದು.

ಗ್ರಹಣದ ಕಾಲದ ಅನುಷ್ಠಾನ ಮಂತ್ರಸಿದ್ಧಿಗೆ, ಪಿತೃಗಳ ಪ್ರೀತಿಗೆ ಶ್ರೇಷ್ಠ ಸಮಯ. ಉಪದೇಶ ಪಡೆದಿರುವ ಮಂತ್ರಗಳನ್ನು ಪಠಿಸಿ, ತರ್ಪಣಾದಿಗಳನ್ನು ನೀಡಬೇಕು.

ಗ್ರಹಣದಿಂದ ಉಂಟಾಗಬಹುದಾದ ಸಮಸ್ತ ದುಷ್ಪರಿಣಾಮವನ್ನೂ ಗ್ರಹಗಳ ದಿಕ್ಪಾಲಕರ

ಅಂತರ್ಯಾಮಿಯಾದ ಮಧ್ವೇಶ ಶ್ರೀಮನ್-ನರಸಿಂಹ ಪರಿಹರಿಸಲಿ, ಗ್ರಹಣದ ಪರ್ವಕಾಲದಲ್ಲಿ ನಿಮ್ಮಿಂದ ಶ್ರೇಷ್ಠ ಸಾಧನೆ ನಡೆಯಲಿ, ನೀವು ಮಾಡುವ ಎಲ್ಲ ಸತ್ಕರ್ಮಗಳೂ ಶ್ರೀ ಹರಿ ವಾಯು ದೇವತಾ ಗುರುಗಳಿಗೆ ಪ್ರಿಯವಾಗಲಿ ಎಂಬ ಹಾರೈಕೆಯೊಂದಿಗೆ

— ವಿಷ್ಣುದಾಸ ನಾಗೇಂದ್ರಾಚಾರ್ಯ

## ಗ್ರಹಣದ ಕುರಿತ ಲೇಖನಗಳ ಲಿಂಕ್

ಈ ಕೆಳಗಿನ ಯಾವುದೇ ಶಬ್ದವನ್ನು ಒತ್ತಿದರೂ ಅದಕ್ಕೆ ಸಂಬಂಧಪಟ್ಟ ಪುಟ ತೆರೆದುಕೊಳ್ಳುತ್ತದೆ.

### ಗ್ರಹಣದ ಅನುಷ್ಠಾನಗಳು

**ಗ್ರಹಣದ ಸಂದರ್ಭದಲ್ಲಿ ಮಾಡಬೇಕಾದ, ಮಾಡಬಾರದ, ಮಾಡಬಹುದಾದ, ಮಾಡಲೇಬೇಕಾದ ಕರ್ಮಗಳ ಕುರಿತ ಚಿಂತನೆ ಇಲ್ಲಿದೆ.**

vishwanandini.com/fullarticle.php?serialnumber=VNA004

— — — — — — — — — — — — — — — — —

### ಅಶೌಚದಲ್ಲಿ ಗ್ರಹಣದ ಆಚರಣೆ

**ಶೂದ್ರರು, ಹಸುಗೂಸುಗಳು, ಉಪನಯನವಾದ ಮಕ್ಕಳು, ಮದುವೆಯಾಗದ ಹೆಣ್ಣುಮಕ್ಕಳು, ರಜಸ್ವಲೆಯರು, ಜಾತಾಶೌಚದವರು, ಮೃತಾಶೌಚದವರು, ತೀವ್ರವಾದ ಖಾಯಿಲೆ ಇರುವವರು, ಪ್ರಯಾಣ ಮಾಡುವವರು ಯಾವ ರೀತಿ ಗ್ರಹಣದ ಆಚರಣೆ ಮಾಡಬೇಕು ಎಂದು ವಿವರಿಸುವ ಲೇಖನ.**

vishwanandini.com/fullarticle.php?serialnumber=VNA271

## ಗ್ರಹಣದ ಸಂಕಲ್ಪ ಮತ್ತು ಸಮರ್ಪಣೆ

**ಗ್ರಹಣಕಾಲದಲ್ಲಿ ಮಾಡುವ ಪಾರಾಯಣ, ಜಪ, ತರ್ಪಣ ಮುಂತಾದ ಸತ್ಕರ್ಮಗಳ ಮೊದಲು ಮಾಡಬೇಕಾದ ಸಂಕಲ್ಪ ಮತ್ತು ನಂತರ ಮಾಡಬೇಕಾದ ಸಮರ್ಪಣೆಯ ಕ್ರಮವನ್ನು ಅರ್ಥಸಹಿತವಾಗಿ ಇಲ್ಲಿ ವಿವರಿಸಲಾಗಿದೆ.**

http://vishwanandini.com/fullarticle.php?serialnumber=VNA270

— — — — — — — — — — — — — — — — — —

## ಗ್ರಹಣಕಾಲದಲ್ಲಿ ದಿಗ್ದೇವತೆಗಳ ಪ್ರಾರ್ಥನೆ

**ಗ್ರಹಣಕಾಲದಲ್ಲಿ ಎಂಟೂ ದಿಕ್ಕಿನ ದೇವತೆಗಳಿಗೆ ಪ್ರಾರ್ಥನೆ ಸಲ್ಲಿಸಬೇಕೆಂದು ಶಾಸ್ತ್ರ ವಿಧಿಸುತ್ತದೆ. ಆ ಪ್ರಾರ್ಥನಾಶ್ಲೋಕಗಳು ಮತ್ತು ಅವುಗಳ ಅರ್ಥವಿವರಣೆ ಇಲ್ಲಿದೆ.**

**vishwanandini.com/fullarticle.php?serialnumber=VNA005**

## ಮಹಾ ಆಪತ್ತನ್ನು ಪರಿಹರಿಸುವ ಉಗ್ರನರಸಿಂಹ ಸ್ತುತಿ

ಪರಿಹರಿಸಲಿಕ್ಕೆ ಸಾಧ್ಯವಿಲ್ಲದ ಖಾಯಿಲೆಯಾಗಿರಲಿ
ದಾಟಲಿಕ್ಕೆ ಸಾಧ್ಯವಿಲ್ಲದ ಘೋರ ಕಷ್ಟವಿರಲಿ
ಶತ್ರುಗಳಿಂದ ಅಪಾರ ದೈಹಿಕ ನೋವಾಗಿರಲಿ
ನಮ್ಮವರೇ ನೀಡುವ ಅಪಾರ ಮಾನಸಿಕ ಹಿಂಸೆಯಾಗಿರಲಿ

ಒಟ್ಟಾರೆ ಸಕಲ ವಿಧ ಆಪತ್ತುಗಳಿಂದ
ನಮ್ಮನ್ನು ಪಾರು ಮಾಡುವ
ಉಗ್ರನರಸಿಂಹನ ಅಪೂರ್ವ ರಹಸ್ಯ ಚಿಂತನೆಯನ್ನು

ಶ್ರೀ ತ್ರಿವಿಕ್ರಮಪಂಡಿತಾಚಾರ್ಯರ ಶ್ರೀ ನರಸಿಂಹ ಸ್ತುತಿಗೆ
ವ್ಯಾಖ್ಯಾನ ಮಾಡುತ್ತ
ಶ್ರೀಸುಮತೀಂದ್ರತೀರ್ಥ ಗುರುಸಾರ್ವಭೌಮರು
ತಿಳಿಸಿದ್ದಾರೆ.

ಈ ಪರಮಶಕ್ತಿಶಾಲಿ ಶ್ಲೋಕ ಮತ್ತು ಶ್ರೀ ತ್ರಿವಿಕ್ರಮಪಂಡಿತಾಚಾರ್ಯರು ತಿಳಿಸಿರುವ ಪ್ರಾರ್ಥನೆಯ ಪಠಣೆ ವಿವರಣೆಗಳು ವಿಶ್ವನಂದಿನಿಯ **“ಸ್ತೋತ್ರಗಳ ಅರ್ಥ”** ಎಂಬ Folder ನಲ್ಲಿದೆ. LINK –

http://vishwanandini.com/fullprashnottara.php?serialnumber=VNP188

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **NEW IFSC** **SBIN0040076**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**"ವಿಶ್ವನಂದಿನಿ ಗಮ್ಯ ತಲುಪಲಿ"**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**

No. 2, "Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India
nagendracharya@yahoo.co.in
WhatsApp:  9901 551 491